**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೆ.ಜಿ.ಎಫ್**

ಸಿ.ಸಿ. ಸಂಖ್ಯೆ: **2603/2023**

ಪಿರ್ಯಾದುದಾರರು: ಸರ್ಕಾರದ ಪರವಾಗಿ ಉರಿಗಾಂ ಪೊಲೀಸರು.

ವಿರುದ್ಧ

ಆರೋಪಿತ/ರು: 1. ಮುಗಂತಬಾಬು @ ಪುಲಿಕುಟ್ಟಿ @ ಕುಟ್ಟಿ ಬಿನ್ ರಾಜೇಂದ್ರನ್ , 38 ವರ್ಷ,
ವಾಸ: ನಂ. 52, ನ್ಯೂ ಮಾಡಲ್ ಹೌಸ್ ,
ಶಿವರಾಜನಗರ, ಉರಿಗಾಂ ಪೋಸ್ಟ್ , ಕೆಜಿಎಫ್.

2 ಪ್ರವೀಣ್ ಬಿನ್ ಅಂಬೇತ್ , 37 ವರ್ಷ,
ವಾಸ: ನಂ. 132/ಎ, ನ್ಯೂ ಮಾಡಲ್ ಹೌಸ್ ,
ಶಿವರಾಜನಗರ, ಉರಿಗಾಂ ಪೋಸ್ಟ್ , ಕೆಜಿಎಫ್.

ದೋಷಾರೋಪಣೆ

ಮಂಜು ಎಂ , 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಕೆಜಿಎಫ್ ಆದ ನಾನು ಆರೋಪಿಯಾದ ನಿಮ್ಮ ವಿರುದ್ದ ರೂಪಿಸುವ ದೋಷಾರೋಪಣೆ ಸಾರಾಂಶ ಏನೆಂದರೆ:-

ದಿನಾಂಕ 25.06.2023 ರಂದು ಮದ್ಯಾಹ್ನ 12.15 ಗಂಟೆಯಲ್ಲಿ ಚಾಸಾ 1 ಮತ್ತು ಸಿಬ್ಬಂದಿಗಳಾದ ಚಾಸಾ 2 ಮತ್ತು 3 ಹಾಗೂ ಇಲಾಖಾ ಜೀಪ್ ಸಂಖ್ಯೆ ಕೆ ಎ 08 ಜಿ 113 ರಲ್ಲಿ ಚಾಸಾ 4 ರವರೊಂದಿಗೆ ಠಾಣಾ ಸರಹದ್ದು ಎನ್ ಟಿ ಅಂಡ್ ಇ ಡಿ ಬ್ಲಾಕ್ ಕಡೆ ಗಸ್ತಿನಲ್ಲಿದ್ದಾಗ 1 ನೇ ಅರೋಪಿಯಾದ ನೀವು ತಳ್ಳುವ ಗಾಡಿಯಲ್ಲಿ ಮರದ ಪೀಸುಗಳನ್ನು ಇಟ್ಟುಕೊಂಡು ಬುಲೆನ್ಸ್ ಶಾಪ್ಟ್ ಕಡೆಯಿಂದ ಎನ್ ಟಿ ಬ್ಲಾಕ್ ಕಡೆ ಹೋಗಲು ತಳ್ಳಿಕೊಂಡು ಬರುತ್ತಿದ್ದಾಗ ಸಮವಸ್ತ್ರದಲ್ಲಿದ್ದ ಪೋಲಸ್ ಸಿಬ್ಬಂದಿಯನ್ನು ಮತ್ತು ಇಲಾಖಾ ವಾಹನವನ್ನು ಕಂಡು ವಾಪಸ್ಸು ತಿರುಗಿಸಿಕೊಳ್ಳಲು ಪ್ರಯತ್ನಿಸಿರುತ್ತೀರಿ, 1 ಮತ್ತು 2 ನೇ ಅರೋಪಿಗಳಾದ ನೀವು

ಇಬ್ಬರೂ ಸೇರಿಕೊಂಡು ಈಗ್ಗೆ ಸುಮಾರು 2 ತಿಂಗಳ ಹಿಂದೆ ಮಾರಿಕುಪ್ಪಂ ಬಿ ಜಿ ಎಂ ಎಲ್ ಗೆ ಸೇರಿದ ಎನ್ ಐ ಎಂ ಹೆಚ್ ಬಂಗ್ಲೋದಲ್ಲಿ 2 ನೇ ಅರೋಪಿಯಾದ ನೀವು ಸದರಿ ಬಂಗ್ಲೋದಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದಾಗ ಯಾರು ಇಲ್ಲದ ಸಮಯದಲ್ಲಿ 7 ಮರದ ಪೀಸುಗಳನ್ನು ಮತ್ತು 6 ಮರದ ಡೋರ್ ಗಳನ್ನು ಕಳುವು ಮಾಡಿಕೊಂಡು ಅಲ್ಲಿಯೇ ಪಕ್ಕದಲ್ಲಿದ್ದ ಬಿ ಜಿ ಎಂ ಎಲ್ ಖಾಲಿ ಜಾಗದಲ್ಲಿ ಮರೆಮಾಚಿ ಕಳ್ಳತನ ಮಾಡಿರುವುದು ಕಂಡು ಬಂದಿರುವ ಮೂಲಕ ಆರೋಪಿಗಳಾದ ನೀವು ನನ್ನ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ 380 ಹಾಗೂ ಸಹ ವಾಚಕ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ದಿನಾಂಕಃ 05-03-2024 ರಂದು ಓದಿ ಹೇಳಿ ಕೇಳಿ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿ ಯಥಾವತ್ತಾಗಿ ನಮೂದಿಸಲಾಗಿದೆ. )

sd/-
**(ಮಂಜು ಎಂ )**
**2 ನೇ ಅಪರ ಸಿವಿಲ್ ನ್ಯಾಯಾಧೀಶರು,**
**ಕೆಜಿಎಫ್**